ತಾರೀಖು 25ನೇ ಏಪ್ರಲ್ 1896, ಮೊಕ್ಕಾಂ ಮೈಸೂರು.

ನಂ. 9588.—ರೆ. ಘಾ. 104—95, ತುಮಕೂರು ತಾಲ್ಲೂಕು ಅಮಲ್‌ದಾರ್ ಮಹಮ್ಮದ್‌ರಜಾಯವರಿಗೆ, 1896ನೇ ಏಪ್ರಿಲ್ 11ನೇ ಮತ್ತು ಂ 9311—ರೆ. ಘಾ. 104—95ನೇ ನಂಬರ್ ಗವರ್ನ್‌ಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ಬಂದು ದಿನದ ಕ್ಯಾಜುಯಲ್ ರಜಾ ಅವರ ಕೋರಿಕೆಯಂತೆ ಇದರಿಂದ ರದ್ದುಮಾಡಲ್ಪಟ್ಟಿರುತ್ತೆ.

ತಾರೀಖು 29ನೇ ಏಪ್ರಿಲ್ 1896, ಮೊಕ್ಕಾಂ ಮೈಸೂರ್.

ನಂ. 9661.—ರೆ. 3731,—ಕುಣಿಗಲ್ ತಾಲ್ಲೂಕು ಅಮಲ್‌ದಾರ್ ವಿ. ಪಾರ್ಥಸಾರಥಿ ಅಯ್ಯಂಗಾರ್‌ರವರಿಗೆ, 1896ನೇ ಜನವರಿ 29ನೇ ಮತ್ತು ಂ 6798.—ರೆ. 2640ನೇ ನಂಬರ್ ಗವರ್ನ್‌ಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ನಲ್ವತ್ತು ದಿನಗಳ ಪ್ರಿವಿಲೀಜ್ ರಜಾವನ್ನು 1896ನೇ ಮಾರ್ಚ್ 18ನೇ ಮತ್ತು ಂ ಲಾಗಾಯತು ಅವರು ಉಪಯೋಗಿಸಿಕೊಂಡು ಮತ್ತು 1896ನೇ ಏಪ್ರಿಲ್ 18ನೇ ಮತ್ತು ಮಿನ ಪೂರ್ವಾಹ್ಣದಲ್ಲಿ ಕೆಲಸಕ್ಕೆ ವಾಪಸ್ ಬಂದ ಸಬಬು, ಉಪಯೋಗಿಸಿಕೊಳ್ಳದ ರಜಾ ಭಾಗವನ್ನು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ನಂ. 9666.—ರೆ. 3734,—ಸಿರಾ ತಾಲ್ಲೂಕು ಅಮಲ್‌ದಾರ್ ವಿ. ವೇದಾಂತದೇಶಿಗಂ ಅಯ್ಯಂಗಾರ್‌ರವರಿಗೆ 1896ನೇ ಫಿಬ್ರವರಿ 21ನೇ ಮತ್ತು ಂ 7500.—ರೆ. 2925ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಅವರಿಗೆ ಕೊಡಲ್ಪಟ್ಟಿದ್ದ ವೊಂದು ತಿಂಗಳ ಪ್ರಿವಿಲೀಜ್ ರಜಾವನ್ನು 1896ನೇ ಮಾರ್ಚ್ 2ನೇ ಮತ್ತು ಂ ಲಾಗಾಯತು ಉಪಯೋಗಿಸಿಕೊಂಡು ಮತ್ತು 1896ನೇ ಏಪ್ರಿಲ್ 1ನೇ ಮತ್ತು ಮಿನ ಪೂರ್ವಾಹ್ಣದಲ್ಲಿ ಕೆಲಸಕ್ಕೆ ವಾಪಸ್ ಬಂದ ಸಬಬು, ಉಪಯೋಗಿಸಿಕೊಳ್ಳದ ರಜಾ ಭಾಗವನ್ನ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 30ನೇ ಏಪ್ರಿಲ್ 1896, ಮೊಕ್ಕಾಂ ಮೈಸೂರ್.

ನಂ. 9683.—ರೆ. 374 ,—ಇದರಡಿಕಂಡ ಗ್ರಾಮಗಳ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತವೆ:—

ಗ್ರಾಮದ ಹೆಸರು.	ಯಾವ ತಾಲ್ಲೂಕಿನಿಂದ.	ಯಾವ ತಾಲ್ಲೂಕಿಗೆ.
1. ಕೆಂಪನಪುರ ಗ್ರಾಮ (ಸರ್ವಮಾನ್ಯ)	ತಿರುಮಕೂಡ್ಲು ನರಸೀಪುರ ಡಿಟ್ಟೋ	ಚಾಮರಾಜನಗರ ಡಿಟೋ
2. ಕನ್ನಗಾಲ್ ಗ್ರಾಮ (ಜೋಡಿ)		

ನಂ. 9684.—ರೆ. 3741,—ಕಾಯಂಗುತ್ತಾ ಮಾರಗೊಂಡನಹಳ್ಳಿ, ಕೃಷ್ಣಸಾಗರ ಗ್ರಾಮವನ್ನ ಕೋಲಾರ ಟೆ ಸಬ್ ತಾಲ್ಲೂಕಿನಿಂದ ಬೆಂಗಳೂರು ತಾಲ್ಲೂಕಿಗೆ ವರ್ಗಾಯಿಸಿರುತ್ತೆ.

ಹುಕುಂ ಬಮೋಜೀಬ್,
ಸಿ. ಶ್ರೀನಿವಾಸಯ್ಯಂಗಾರ್ ಜನರಲ್ ವ ರವಿನ್ಯೂ
ಇಲಾಖೆಗಳ ಗವರ್ನ್‌ಮೆಂಟ್ ಸೆಕ್ರೆಟರಿ.

ಮಿಲಿಟರಿ.

ಇಸ್ತಿಹಾರ್‌ನಾಮಾ.

ತಾರೀಖು 2ನೇ ಮೇ 1896.

ಲೋಕಲ್ ಸರ್ವಿಸ್ ರೆಜಿಮೆಂಟಿನಲ್ಲಿ 1896ನೇ ಏಪ್ರಿಲ್ 11ನೇ ಮತ್ತು ಂ ಲಾಗಾಯತು ಇದರಡಿಕಂಡ ಬಡ್ತಿಗಳು ಮಾಡಲ್ಪಟ್ಟಿರುತವೆ:—

ಹೆಸರು.	ಹುದ್ದೆಯಿಂದ.	ಹುದ್ದೆಗೆ.	ಷರಾ.
ಮಹಮ್ಮದ್ ಇಸ್ಮಾಯಿಲ್	ಸರ್‌ಜಫ್‌ದಾರ್	ರಿಸಾಲ್‌ದಾರ್, 4ನೇ ಗ್ರೇಡ್	ಬಡ್ತಿಮಾಡಲ್ಪಟ್ಟ ರಿಸಾಲ್‌ದಾರ್ ಕೃಷ್ಣರಾಯರಿಗೆ ಬದಲಾಗಿ.
ಮಿಯಾ ಸಾದುದ್ದಿ	ಸುಪರ್‌ನ್ಯೂಮರೆರಿ ಜಮಾದಾರ್	ಸರ್‌ಜಫ್‌ದಾರ್.	

ಹುಕುಂ ಬಮೋಜೀಬ್,
ಏ. ಯಚ್. ಮೆಕ್ಕಿಂಟೈರ್, ಲೆ. ಕರ್ನಲ್,
ಮಿಲಿಟರಿ ಸೆಕ್ರೆಟರಿ.